**ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ದಿ.10.01.2022 ರಿಂದ ದಿ.25.02.2022 ರವರೆಗೆ ನೀವು ಆರೋಗ್ಯದಿಂದ ಇದ್ದೇನೆ ಎಂದು ಸಾಕ್ಷ್ಯ ನುಡಿದಿದ್ದು ಆ ಅವಧಿಯಲ್ಲಿ ಸದರಿ ಪ್ರಕರಣ ದಾಖಲಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ನಿ.ಸಿ.4 ರಂತೆ ನಿಮ್ಮ ಮಗಳು ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ದಿ.17.03.2021 ರ ವೇಳೆಯಲ್ಲಿ ವೇದಾವತಿಯವರು ನಿಮಗೆ ಚೆಕ್ಕು ನೀಡಿರಲಿಲ್ಲ ಎಂದರೆ ಸರಿಯಲ್ಲ. ದೂರಿನ ಆಧಾರದ ಮೇಲೆ ಪೊಲೀಸರು ನಿ.ಸಿ.2 ರಂತೆ ದೂರು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ತನಿಖೆ ಪೂರ್ಣಗೊಳಿಸಿ ನಿ.ಸಿ.5 ರಂತೆ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಸಿ.1 ರಂತೆ ನಿಮ್ಮ ಮಗಳು ದಿ.13.05.2022 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ನೀವು ಸಲ್ಲಿಸಿರುವ ದಾಖಲೆಗಳ ಪ್ರಕಾರ ದಿ.25.02.2022 ರೊಳಗಾಗಿ ನೀವು ಪ್ರಕರಣ ದಾಖಲಿಸಬೇಕಾಗಿತ್ತು, ಆ ಅವಧಿಯ ಮೂರು ತಿಂಗಳ ನಂತರ ನಿಮ್ಮ ಮಗಳು ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನೀವು ಸಲ್ಲಿಸಿರುವ ನಿ.ಸಿ.1 ರಿಂದ 5 ರ ದಾಖಲೆಗಳು ನಿಮ್ಮ ಮಗಳು ಮತ್ತು ಆಕೆಯ ಗಂಡನಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ನಿಮಗೆ ಅನಾರೋಗ್ಯವಿತ್ತು ಎಂದರೆ ಸಾಕ್ಷಿಯು ನನಗೆ ಸ್ವಲ್ಪ ದಿನ ಅನಾರೋಗ್ಯವಿರುತ್ತದೆ ಆ ನಂತರ ಚಿಕಿತ್ಸೆ ಪಡೆದುಕೊಂಡ ನಂತರ ಸುಧಾರಿಸುತ್ತದೆ ಆ ನಂತರ ಪುನಃ ಅನಾರೋಗ್ಯ ಕಾಡುತ್ತದೆ ಎಂದು ನುಡಿಯುತ್ತಾರೆ. ಚಿಕಿತ್ಸೆಗಾಗಿ ಶಾರದಾ ಕ್ಲಿನಿಕ್‌ಗೆ ಹೋಗಿದ್ದೆನು, ಆದರೆ ದಿನಾಂಕ ನೆನಪಿರುವುದಿಲ್ಲ. ರಘುನಂದನ್ ಎಂಬ ವೈದ್ಯರು ಚಿಕಿತ್ಸೆ ನೀಡಿದರು. ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

ವೈದ್ಯರನ್ನು ಸಾಕ್ಷಿದಾರರನ್ನಾಗಿ ಹಾಜರುಪಡಿಸಲು ಸಾಧ್ಯವಾಗುವುದಿಲ್ಲ. 250 ದಿನಗಳ ಕಾಲ ವಿಳಂಬ ಮನ್ನಕ್ಕಾಗಿ ಯಾವುದೇ ಸೂಕ್ತ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. 250 ದಿನದ ಪ್ರತಿಯೊಂದು ದಿನಕ್ಕು ಪ್ರತ್ಯೇಕವಾದ ಕಾರಣ ನೀಡದ ಕಾರಣ ನೀವು ಅರ್ಜಿಯಲ್ಲಿ ಕೋರಿರುವಂತಹ ಪರಿಹಾರ ಪಡೆದುಕೊಳ್ಳಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಆರೋಗ್ಯದಿಂದ ಇದ್ದರೂ ಸಹ ಕಾಲ ಮಿತಿಯಲ್ಲಿ ಪ್ರಕರಣವನ್ನು ದಾಖಲಿಸದೆ ವಿಳಂಬಕ್ಕಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು

ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.